ಬಾಲಿವುಡ್

# ಸಲ್ಮಾನ್ ಕಲಿಯದ ಪಾಠ



ಟೈಗರ್ ಜಿಂದಾ ಹೈ..! ಅಂತೂ ಜೋಧ್‌ಪುರ ಸೆಂಟ್ರಲ್ ಜೈಲಿನಿಂದ ಸಲ್ಮಾನ್ ಖಾನ್ ಜಾಮೀನಿನ ಮೇಲೆ ಹೊರಗೆ ಬಂದಿದ್ದಾನೆ. ಎರಡು ಕೃಷ್ಣಮೃಗಗಳನ್ನು ಶಿಕಾರಿ ಮಾಡಿ ಹೊಡೆದುರುಳಿಸಿದ ಪ್ರಕರಣದಲ್ಲಿ ಜೋಧ್‌ಪುರ ಕೋರ್ಟ್ ಸಲ್ಮಾನ್ ಖಾನ್‌ನಿಗೆ ಐದು ವರ್ಷಗಳ ಜೈಲು ಶಿಕ್ಷೆ ಪ್ರಕಟಿಸಿದ ಬಳಿಕ, ಆತನ ಲಕ್ಷಾಂತರ ಅಭಿಮಾನಿಗಳು ಬೇಸರಗೊಂಡಿದ್ದರು. ಆದರೆ ಎರಡು ರಾತ್ರಿ ಜೈಲಿನಲ್ಲಿ ಕಳೆದ ಬಳಿಕ, ಸಲ್ಮಾನ್‌ನ ಜಾಮೀನು ಅರ್ಜಿಗೆ ಕೋರ್ಟ್ ಸಮ್ಮತಿ ನೀಡಿದೆ. 50 ಸಾವಿರ ರೂಪಾಯಿಗಳ ಎರಡು ಬಾಂಡ್ ಮತ್ತು ವೈಯಕ್ತಿಕ ಜಾಮೀನಿನ ಮೇಲೆ ಹೊರಬಂದಿರುವ ಸಲ್ಮಾನ್, ಮುಂದೆ ಶಿಕ್ಷೆಯ ಅವಧಿಯನ್ನು ಹೇಗೆ ಕಳೆಯುತ್ತಾನೋ ನೋಡಬೇಕು.

ಹಾಗೆ ನೋಡಿದರೆ, ಸಲ್ಮಾನ್ ಈ ಪ್ರಕರಣದಲ್ಲಿ ಜೈಲಿಗೆ ಹೋಗಿದ್ದು ಇದೇ ಮೊದಲಲ್ಲ. ಈ ಶಿಕಾರಿಯ ಪ್ರಕರಣ ನಡೆದದ್ದು 1998ರಲ್ಲಿ. ಕಳೆದ 20 ವರ್ಷಗಳಿಂದ ವಿಚಾರಣೆ ನಡೆದೇ ಇತ್ತು. 1998, 2006 ಮತ್ತು 2007ರಲ್ಲೂ ಸಲ್ಮಾನ್ ಜೈಲಿನಲ್ಲಿ ಒಟ್ಟು 18 ದಿನಗಳನ್ನು ಕಳೆದಿದ್ದಾನೆ.

ಸಲ್ಮಾನ್ ಎಷ್ಟೊಂದು ಪ್ರಭಾವಶಾಲಿ ಎನ್ನುವುದಕ್ಕೆ ಎರಡು ದಶಕಗಳ ಕಾಲ ನಡೆದ ಈ ವಿಚಾರಣೆಯೇ ಸಾಕ್ಷಿ. ಸಾಮಾನ್ಯವಾಗಿ ವನ್ಯಜೀವಿ ಕಾಯ್ದೆ ಉಲ್ಲಂಘನೆ ಪ್ರಕರಣದಲ್ಲಿ ಜಾಮೀನು ಸಿಗುವುದು ಕಷ್ಟ. ಆದರೆ ಸಲ್ಮಾನ್ ವಿಐಪಿ ಎನ್ನುವುದು ಇಲ್ಲೂ ಸಾಬೀತಾಗಿದೆ. ಜಾಮೀನಿನ ವಿರುದ್ಧ ಹೈಕೋರ್ಟ್‌ಗೆ ಹೋಗುವುದಾಗಿ ಬಿಷ್ಣೋವಿ ಜನರ ವಕೀಲರು ಹೇಳಿದ್ದು, ಮೇ 7ರಂದು ಮತ್ತೆ ವಿಚಾರಣೆ ನಡೆಯಲಿದೆ.

ಕೃಷ್ಣಮೃಗ ಬೇಟೆಯ ಸಂದರ್ಭದಲ್ಲಿ ಸಲ್ಮಾನ್ ಜತೆಗೆ ಸಹನಟರಾದ ಸೈಫ್ ಅಲಿ ಖಾನ್, ಸೊನಾಲಿ ಬೇಂದ್ರೆ, ಟಬೂ ಮತ್ತು ನೀಲಂ ಕೂಡಾ ಇದ್ದರು. ಆದರೆ ಅವರು ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಶಿಕ್ಷೆಯಿಂದ ಪಾರಾಗಿದ್ದಾರೆ. ಇವರೆಲ್ಲರೂ 'ಹಮ್ ಸಾಥ್ ಸಾಥ್ ಹೈ' ಎಂಬ ಯಶಸ್ವಿ ಚಿತ್ರದ ಶೂಟಿಂಗ್ ವೇಳೆಗೆ ಜತೆಯಲ್ಲಿದ್ದರು. ಪ್ರಕರಣದ ತೀರ್ಪು ಬಂದಾಗ, ಸಲ್ಮಾನ್ ಒಬ್ಬನಿಗೇ ಶಿಕ್ಷೆಯಾಗಿದ್ದು, 'ಹಮ್ ಸಾಥ್ ಸಾಥ್ ನಹೀ ಹೈ' ಎನ್ನುವಂತಾಗಿತ್ತು.

ಬಾಲಿವುಡ್‌ನಲ್ಲಿ ಸಲ್ಮಾನ್ ಇವತ್ತಿಗೂ ಓಡುವ ಕುದುರೆ. ಈ ಶಿಕ್ಷೆ ಆತನ ವೃತ್ತಿಜೀವನವನ್ನು ಕೊನೆಗೊಳಿಸಬಹುದೆ ಎನ್ನುವ ಪ್ರಶ್ನೆಯೊಂದು ಎದುರಿಗಿದೆ. ಜೂನ್ 14ರಂದು ಆತನ ಹೊಸ ಚಿತ್ರ 'ರೇಸ್–3' ಬಿಡುಗಡೆಯಾಗಲಿದೆ. ಜಾಕ್ವೆಲಿನ್ ಫೆರ್ನಾಂಡಿಸ್ ಮತ್ತು ಅನಿಲ್ ಕಪೂರ್ ಜತೆಗಿರುವ ಈ ಸಿನಿಮಾದ ಮೇಲೆ ಈಗ ನಿರೀಕ್ಷೆಗಳು ಇನ್ನಷ್ಟು ಹೆಚ್ಚಾಗಿವೆ. ಅದಾದ ಬಳಿಕ 'ಭರತ್' ಎನ್ನುವ ಚಿತ್ರ ಆರಂಭವಾಗಬೇಕಿದೆ. 'ಓಡ್ ಟು ಮೈ ಫಾದರ್' ಎನ್ನುವ ಕೊರಿಯನ್ ಚಿತ್ರದ ರೂಪಾಂತರವದು. ಆ ಬಳಿಕ 'ದಬಾಂಗ್–3' ಬರುವುದೆಂದೂ ನಿಶ್ಚಯವಾಗಿದೆ. ಸಲ್ಮಾನ್ ಮೇಲೆ ಸುಮಾರು 300 ಕೋಟಿ ರೂಪಾಯಿಗಳಷ್ಟು ಹೂಡಿಕೆ ಮಾಡಿರುವ ನಿರ್ಮಾಪಕರು ಕೋರ್ಟ್ ತೀರ್ಪಿನಿಂದ ಚಿಂತಾಕ್ರಾಂತರಾಗಿ ರುವುದಂತೂ ಸುಳ್ಳಲ್ಲ. ಚಿತ್ರಜಗತ್ತಿನಲ್ಲಿ ಜನಪ್ರಿಯತೆ ಮತ್ತು ಖ್ಯಾತಿಯಲ್ಲಿ ಉತ್ತುಂಗಕ್ಕೇರಿರುವ ನಟನೊಬ್ಬ ವೈಯಕ್ತಿಕ ಜೀವನದಲ್ಲಿ ಇಷ್ಟೊಂದು ಬೇಜವಾಬ್ದಾರಿ ಮತ್ತು ಅಶಿಸ್ತಿನಿಂದ ಇರಬಹುದೆ.. ಎನ್ನುವ ಪ್ರಶ್ನೆ ಮಹತ್ವದ್ದು. ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸುವಷ್ಟೂ ವಿನಯವಂತಿಕೆ ಇಲ್ಲದಿದ್ದರೆ, ಯಾವುದೇ ವ್ಯಕ್ತಿಯ ಖ್ಯಾತಿ ಮತ್ತು ಜನಪ್ರಿಯತೆಗೆ ಅರ್ಥವೆಲ್ಲಿದೆ?

■ ಬಿಂದು